

ನೀವು ಫೈಟಿಂಗ್ ಮಾಡ್ತಿರೋದು ಯಾರ ವಿರುದ್ಧ?"

"ನಿನ್ನ ರಕ್ತ ಕುದಿಯುವುದಿಲ್ಲವೆಂದ ಮೇಲೆ ನಾನು ನಿನಗ್ಯಾಕೆ ಹೇಳಬೇಕು? ನಿನ್ನ ದೈನಂದಿನ ಸಮಸ್ಯೆಗಳ ಬಗ್ಗೆ ತಲೆಕೆಡಿಸಿಕೊಳ್ಳದ ನೀನು ನನ್ನ ಸಮಸ್ಯೆಗಳನ್ನು ಯಾಕೆ ಕೇಳುತ್ತಿರುವೆ?"

"ಕ್ಯೂರಿಯಾಸಿಟಿ ಸರ್. ಹೇಳಬಹುದು ಎಂದಾದರೆ ದಯವಿಟ್ಟು ಹೇಳಿ."

"ಹೇಳಬಹುದು. ಅದಕ್ಕೆ ನಾನೊಂದು ಪ್ರತ್ಯುಪಕಾರವನ್ನು ಬಯಸುತ್ತಿದ್ದೇನೆ."

ನನ್ನ ಮುಖ ಬಾಡಿತು. ಊರಿಗೇ ಒಂದು ಉಪಕಾರ ಮಾಡದವನು ಈ ಹೊಸಬನಿಗೆ ಏನು ತಾನೇ ಉಪಕಾರ ಮಾಡಬಲ್ಲ?

"ನೀನು ನನ್ನ ಪರವಾಗಿ ಮೂರು ಪತ್ರಗಳನ್ನು ಬರಿಯಬೇಕು."

"ಪತ್ರ ತಾನೇ. ಬರೆಯಬಲ್ಲೆ ಸರ್. ದಿನಪತ್ರಿಕೆ ಸಂಪಾದಕರಿಗೆ ಒಂದಷ್ಟು ಪತ್ರ ಬರೆದ ಅನುಭವವಿದೆ. ನಾನ್ಯಾರಿಗೆ ಪತ್ರ ಬರೀಲಿ?"

"ಹೇಳುತ್ತೇನೆ. ಗುಂಡಿಗೆ ಗಟ್ಟಿ ಮಾಡಿಕೋ. ಒಂದು ಹ್ಯೂಮನ್ ರೈಟ್ಸ್ ಕಮಿಷನ್ ಇಂಟರ್‌ನ್ಯಾಶನಲ್‌ಗೆ. ಎರಡು ಪ್ರೈಂ ಮಿನಿಸ್ಟರ್ ಆಫ್ ಬ್ರಿಟನ್ನು ಮತ್ತು ಮೂರು ಕ್ವೀನ್ ಆಫ್ ಬ್ರಿಟನ್ನು. ಬರೆಯುವಷ್ಟು ಧೈರ್ಯ ನಿನ್ನಲ್ಲಿದೆಯೇ?"

ನನ್ನ ಎದೆ ಧಸಕ್ಕೆಂದಿತು. ಮನೆ ಎದುರಿನ ಬೀದಿ ದೀಪ ಕೆಟ್ಟು ಹೋದುದನ್ನು ಸರಿ ಪಡಿಸಬೇಕೆಂದು ನನ್ನ ಏರಿಯಾದ ಪಂಚಾಯತ್ ಸದಸ್ಯನನ್ನು ತರಾಟೆಗೆ ತೆಗೆದುಕೊಳ್ಳಲು ಹೆದರುವ ನಾನು ಬ್ರಿಟನ್ನಿನ ರಾಣಿಗೆ ಪತ್ರ ಬರೆಯುವುದೇ?

"ಹೆದರಬೇಡ. ಶೀ ಈಸ್ ಆಲ್ಸೋ ಎ ಹ್ಯೂಮನ್ ಬೀಯಿಂಗ್. ನನ್ನ ಪತ್ರಕ್ಕೆ ಈಗಲೂ ಉತ್ತರಿಸುತ್ತಾಳೆ. ನೀನೊಂದು ಬರೆದು ನೋಡು."

"ಸರ್, ನಾನು ಎಡಿಟರ್ಸ್‌ಗೆ ಬರೆವ ಪತ್ರಗಳೇ ಕಸದ ಬುಟ್ಟಿಗೆ ಹೋಗುತ್ತವೆ. ಇನ್ನು ಬ್ರಿಟನ್ನಿನ ರಾಣಿಗೆ ನನ್ನಂಥ ಪುಟಗೋಸಿ ಪತ್ರ ಬರೆದರೆ ಅವಳು ಕೇರ್ ಮಾಡ್ತಾಳಾ ಸರ್?"

ಡಾ. ಸೋನಿಪತ್‌ರ ಮುಖದಲ್ಲಿ ನಗು ಕಾಣಿಸಿಕೊಂಡಿತು.

"ನಿನ್ನ ದೇಶದಂತಲ್ಲ ಬ್ರಿಟನ್ನು. ಅಲ್ಲಿ ಒಬ್ಬ ಹಮಾಲಿ ರಾಣಿಗೆ ಪತ್ರ ಬರೆದರೂ ಉತ್ತರ ಬರುತ್ತದೆ. ಅದು ನಿಜವಾದ ಡೆಮೋಕ್ರಸಿ. ಅದಕ್ಕೇ ನಾನು ಈಗಲೂ ಬ್ರಿಟಿಷ್ ಸಿಟಿಜನ್‌ಶಿಪ್ಪು ಉಳಿಸಿಕೊಂಡಿರೋದು."

ಈಗ ನನಗೆ ಸ್ವಲ್ಪ ಧೈರ್ಯ ಬಂತು. "ಯಾವುದರ ಬಗ್ಗೆ ಪತ್ರ ಬರೆಯಲಿ ಸರ್?"

"ಗುಡ್. ಅದು ನೀನು ಒಬ್ಬ ಜಂಟಲ್‌ಮ್ಯಾನಾಗಿ ಮಾಡಬೇಕಾದ ಕೆಲಸ. ನೀನು ಪತ್ರ ಬರೆಯಬೇಕಾದರೆ ನನ್ನ ಕತೆ ನಿನಗೆ ಗೊತ್ತಾಗಬೇಡವೇ? ಅದನ್ನು ಹೇಳಲೆಂದೇ ನಾನು ಬಂದಿರೋದು."

ನಾನು ಆಸಕ್ತಿಯಿಂದ ಮುಂದಕ್ಕೆ ಬಾಗಿದೆ.

"ನಿನ್ನ ಕುತೂಹಲ ನನಗೆ ಅರ್ಥವಾಗುತ್ತದೆ. ಇದು ಸಿನಿಮಾ ಕತೆಯಲ್ಲ. ಈಚೆ ಕಿವಿಯಲ್ಲಿ ಕೇಳಿ ಆಚೆ ಕಿವಿಯಿಂದ ಬಿಡುವ ವಿಷಯವೂ ಅಲ್ಲ. ನೀನು ಜವಾಬ್ದಾರಿ ತೆಗೆದುಕೊಳ್ಳುತ್ತಿ ಎಂದಾದರೆ ಮಾತ್ರ ನಾನು ಹೇಳುವುದು. ಇಲ್ಲದಿದ್ದರೆ ಅದು ವೇಸ್ಟ್ ಆಫ್ ಟೈಂ."

"ಯಾವ ಜವಾಬ್ದಾರಿ ಸರ್?"

"ಅದೇ, ಆರಂಭದಲ್ಲಿ ನಾನು ಹೇಳಿದ್ದು. ಮೂರು ಪತ್ರ ಬರೆದು ನನಗಾದ ಅನ್ಯಾಯ ಸರಿಪಡಿಸುವುದು."

ಈ ಬಾರಿ ನಾನು ತಕರಾರಿಲ್ಲದೆ ಒಪ್ಪಿಕೊಂಡೆ.

"ಹ್ಞುಂ ಮೂಲತಃ ನಾನು ಹರಿಯಾಣದ ಸೋನಿಪತ್‌ನವನು. ನಾನೊಬ್ಬ ಹಿಂದೂ. ನಮ್ಮ ಸುತ್ತ